## 100. ನೂತನ ಐಟಿ ನೀತಿಗೆ ಸಂಪುಟ ಅನುಮೋದನೆ

ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ಕರ್ನಾಟಕದಲ್ಲಿ ಐಟಿ ಕ್ಷೇತ್ರದ ವ್ಯಾಪ್ತಿ ವಿಸ್ತರಿಸುವ, ಈ ವಲಯದ ಸರ್ವಾಂಗೀಣ ಬೆಳವಣಿಗೆ ದೃಷ್ಟಿಯಿಂದ ಕರ್ನಾಟಕ ಮಾಹಿತಿ ತಂತ್ರಜ್ಞಾನ ಕಾರ್ಯನೀತಿ ಮತ್ತು ವಿದ್ಯುನ್ಮಾನ ವ್ಯವಸ್ಥೆ, ವಿನ್ಯಾಸ, ಉತ್ಪಾದನೆ ಕುರಿತ ನೂತನ ನೀತಿಗಳಿಗೆ ರಾಜ್ಯ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ.

ರಾಜಧಾನಿ ಬೆಂಗಳೂರು ಹೊರಭಾಗದಲ್ಲಿ ಐಟಿ ಕ್ಷೇತ್ರದಲ್ಲಿ ಗಮನಾರ್ಹ ಸುಧಾರಣೆ ತರುವ ಉದ್ದೇಶ ಹೊಂದಿರುವ ಐಟಿ ನೀತಿಯನ್ನು ಜಾರಿಗೆ ತರುತ್ತಿದ್ದು, 2020ರಿಂದ 25ರವರೆಗೆ ಜಾರಿಯಲ್ಲಿರಲಿದೆ. ಮುಂದಿನ ಐದು ವರ್ಷಗಳಲ್ಲಿ ಗರಿಷ್ಠ 60 ಲಕ್ಷ ಉದ್ಯೋಗ ಸೃಷ್ಟಿಸುವ ಗುರಿ ಹೊಂದಲಾಗಿದೆ ಎಂದು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ ಮಾಹಿತಿ ನೀಡಿದ್ದಾರೆ.

ಬೆಂಗಳೂರು ಹೊರ ಭಾಗದಲ್ಲಿ ಐಟಿಯಲ್ಲಿ ಹೂಡಿಕೆ ಮಾಡುವವರಿಗೆ ಸಬ್ಸಿಡಿ, ಪೇಟೆಂಟ್ ಹಕ್ಕಿನ ರಕ್ಷಣೆ, ಹೂಡಿಕೆಗೆ ವಿಪುಲ ಅವಕಾಶ ನೀಡಲಾಗುವುದು. ವರ್ಕ್ ಫ್ರಮ್ ಹೋಂ ಪರಿಕಲ್ಪನೆ ಹೆಚ್ಚಾಗುತ್ತಿದ್ದು, ಇಂತಹ ಐಟಿ ವಲಯಕ್ಕೆ 5 ಜಿ ಇಂಟರ್‌ನೆಟ್ ಸೇರಿ ಹತ್ತು ಹಲವು ಸೌಲಭ್ಯ ಒದಗಿಸಲಾಗುವುದು. ಹಿಂದುಳಿದ ಪ್ರದೇಶಗಳಲ್ಲಿ ಐಟಿ ಕ್ಷೇತ್ರದಲ್ಲಿ ಹೂಡಿಕೆ ಮಾಡಿದರೆ ಶೇ.100ರಷ್ಟು ಪ್ರೋತ್ಸಾಹ ನೀಡಲಾಗುವುದು. ನೋಂದಣಿಯಲ್ಲಿ ರಿಯಾಯಿತಿ, ವಿದ್ಯುತ್‌ಅನ್ನು ಕೈಗಾರಿಕೆ ಬದಲು ವಾಣಿಜ್ಯ ದರದಲ್ಲಿ ಒದಗಿಸಲಾಗುವ ಭೂಮಿ ಖರೀದಿ, ನೀರು ಪೂರೈಕೆಯಲ್ಲೂ ಹೆಚ್ಚಿನ ರಿಯಾಯಿತಿಗಳನ್ನು ಒದಗಿಸಲಾಗುವುದು. ಕೌಶಲ್ಯ ಅಭಿವೃದ್ಧಿಗೂ ಸಹ ಸೂಕ್ತ ಒತ್ತು ನೀಡಲಾಗುವುದು ಎಂದಿದ್ದಾರೆ.

ಬೆಂಗಳೂರು ಹೊರವಲಯದಲ್ಲಿ ಶೇ.75ರಷ್ಟು ಸ್ಟಾಂಪ್ ಡ್ಯೂಟಿಯಲ್ಲಿ ವಿನಾಯಿತಿ ಇದ್ದು, ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕ ಭಾಗದಲ್ಲಿ ಶೇ.100ರಷ್ಟು ವಿನಾಯಿತಿ ನೀಡಲು ಉದ್ದೇಶಿಸಲಾಗಿದೆ. ಇದರಿಂದ ಮುಂದಿನ ಐದು ವರ್ಷಗಳಲ್ಲಿ ಕನಿಷ್ಠ 25 ಲಕ್ಷ ಹಾಗೂ ಗರಿಷ್ಠ 60 ಲಕ್ಷ ಉದ್ಯೋಗ ಸೃಷ್ಟಿಸುವ ಗುರಿ ಹೊಂದಲಾಗಿದೆ. ಕೇಂದ್ರ ಪುರಸ್ಕೃತ ಯೋಜನೆಯಡಿ ಹಾವೇರಿ ಮತ್ತು ಯಾದಗಿರಿಯಲ್ಲಿ ವೈದ್ಯಕೀಯ ಕಾಲೇಜುಗಳನ್ನು ತೆರೆಯಲು ತೀರ್ಮಾನಿಸಿದ್ದು, ಹಾವೇರಿ ವೈದ್ಯಕೀಯ ಕಾಲೇಜಿಗೆ ರೂ.327.46 ಕೋಟಿ ಮತ್ತು ಯಾದಗಿರಿ ಕಾಲೇಜಿಗೆ ರೂ.309 ಕೋಟಿ. ವೆಚ್ಚ ಮಾಡಲಾಗುವುದು ಎಂದು ಸಚಿವ ಜೆ.ಸಿ. ಮಾಧುಸ್ವಾಮಿ ಹೇಳಿದ್ದಾರೆ.

**ಘನತ್ಯಾಜ್ಯ ಸಾಗಾಣಿಕೆ ವೈಫಲ್ಯಕ್ಕೆ ದಂಡ:** ಘನ ತ್ಯಾಜ್ಯ ಸಾಗಾಣಿಕೆ ವಿಫಲವಾದರೆ ದಂಡ ವಿಧಿಸುವ ಕಾನೂನು ಜಾರಿ ಮಾಡಲಾಗುತ್ತಿದೆ. ಇಂತಹ ಕರ್ತವ್ಯ ಲೋಪಕ್ಕೆ 1 ಸಾವಿರದಿಂದ 7 ಲಕ್ಷದವರೆಗೆ ದಂಡ ವಿಧಿಸಲು ಅವಕಾಶವಿದೆ. ಇದಕ್ಕಾಗಿ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ತಿದ್ದುಪಡಿ ವಿಧೇಯಕಕ್ಕೆ ಅನುಮೋದನೆ ನೀಡಲಾಗಿದೆ. ಜಿಎಸ್‌ಟಿ ಮತ್ತು ವೈದ್ಯಕೀಯ ಸುಗ್ರೀವಾಜ್ಞೆಯಾಗಿದ್ದು, ಇವುಗಳ ಸ್ಥಾನದಲ್ಲಿ ಔಪಚಾರಿಕವಾಗಿ ಮುಂದಿನ ಅಧಿವೇಶನದಲ್ಲಿ ವಿಧೇಯಕವಾಗಿ ಮಂಡಿಸಲಾಗುತ್ತದೆ.

**ಸಂಪುಟ ಸಭೆಯ ತೀರ್ಮಾನಗಳು:–**

- ಬಿಬಿಎಂಪಿ ವಾರ್ಡ್‌ಗಳ ಸಂಖ್ಯೆ ಹೆಚ್ಚಳಕ್ಕೆ ಅನುಮೋದನೆ.
- ಕರ್ನಾಟಕ ವಿದ್ಯುತ್ ನಿಗಮದಿಂದ ಜೋಗ ಅಭಿವೃದ್ದಿಗೆ ರೂ.120 ಕೋಟಿ.
- ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕು ಅರಕೇರಾ ಗ್ರಾಮ ಪಂಚಾಯತಿ ಹೊಸ ತಾಲ್ಲೂಕು.
- ಶಿವಮೊಗ್ಗ ಜಿಲ್ಲೆಯ ಸೊರಬ ಪಟ್ಟಣ ಪಂಚಾಯತ್ ಇನ್ನು ಮುಂದೆ ಪುರಸಭೆ
- ಬಾಗಲಕೋಟೆಯ ಮುಧೋಳ ತಾಲ್ಲೂಕಿನ ಲೋಕಾಪುರ ಗ್ರಾಮ ಪಂಚಾಯತ್ ಇನ್ನು ಮುಂದೆ ಪಟ್ಟಣ ಪಂಚಾಯತ್
- ವಿಶ್ವಬ್ಯಾಂಕ್ ನೆರವಿನ ವಾಟರ್ ಶೆಡ್ ಕಾರ್ಯಕ್ರಮ 20 ಜಿಲ್ಲೆಗಳಲ್ಲಿ ಅನುಷ್ಠಾನ.
- ಕೃಷಿ ಬೆಲೆ ಆಯೋಗ ಮುಂದುವರಿಕೆ.

- ಕರ್ನಾಟಕ ಲೋಕಾಯುಕ್ತರಿಗೆ ಅಪರ ನಿಬಂಧಕರ ನೇಮಕ.

ಆಧಾರ: ವಿಶ್ವವಾಣಿ, ದಿನಾಂಕ:04.09.2020